



# ದಾಡಿ ಪುರಾಣ

**ಗಡ್ಡ ಬೆಳೆಸಲು ಅದರ ಮೇಲೆ ಪ್ರೀತಿಯಿದ್ದರಷ್ಟೇ ಸಾಲದು, ನಿರಂತರ ಕಾಳಜಿಯೂ ಇರಬೇಕಾದುದು ಅವಶ್ಯಕ.**

**ಪ.ನಾ.ಹಳ್ಳಿ.ಹರೀಶ್ ಕುಮಾರ್**

ಗಡ್ಡ ಬಿಟ್ಟೋರೆಲ್ಲಾ ವೇದಾಂತಿಗಳಲ್ಲ; ದೇವದಾಸರೂ ಅಲ್ಲ. ಗಡ್ಡ ಬೆಳೆಸಿ ಅದನ್ನು ಟ್ರಿಮ್ ಮಾಡಿಕೊಳ್ಳುವುದರ ಮೂಲಕ ಮುಖದ ಅಂದವನ್ನು ಹೆಚ್ಚಿಸಿಕೊಳ್ಳುವುದು ಈಗೀಗ ಯುವಕರ ನವನವೀನ ಫ್ಯಾಷನ್ ಆಗಿ ರೂಪುಗೊಳ್ಳುತ್ತಿದೆ. ಹಾಗೆಂದು ಗಡ್ಡವನ್ನು ಬೆಳೆಸುವುದು ತಮಾಷೆಯ ವಿಷಯವಂತೂ ಅಲ್ಲ. ಗಡ್ಡವನ್ನು ಬೆಳೆಸುವ ಇಚ್ಛೆ ನಿಮಗಿದ್ದರೆ ಅದಕ್ಕೆ ಪ್ರಬಲ ಇಚ್ಛಾಶಕ್ತಿ ಇರಬೇಕು. ಗಡ್ಡವನ್ನು ಬೆಳೆಸುವುದರ ಜೊತೆಗೆ ಅದನ್ನು ಒಪ್ಪ ಓರಣ ಮಾಡಿಟ್ಟುಕೊಂಡು ಜೋಪಾನ ಮಾಡುವುದು ಸುಲಭದ ಕೆಲಸವಲ್ಲ. ಗಡ್ಡದ ಬೆಳವಣಿಗೆಯ ಕಾಲಘಟ್ಟದಲ್ಲಿ ನೀವು ಅದರ ಆರೈಕೆಯ ಕುರಿತಾಗಿ ಎಚ್ಚರ ವಹಿಸಬೇಕಾಗುತ್ತದೆ.

ಇತ್ತೀಚಿನ ಅಧ್ಯಯನವೊಂದು ಬಹುತೇಕ ಹುಡುಗಿಯರು ಹುಲುಸಾಗಿ ಗಡ್ಡ ಬಿಟ್ಟ ಯುವಕರತ್ತಲೇ ಹೆಚ್ಚು ಆಕರ್ಷಿತರಾಗುತ್ತಾರೆಂದು ಹೇಳಿರುವುದರಿಂದ ಆಗ ತಾನೇ ಗಡ್ಡ ಚಿಗುರಲು ಪ್ರಾರಂಭಿಸಿರುವ ಕಾಲೇಜು ಹುಡುಗರಿಂದ ಪ್ರಾರಂಭಿಸಿ ವೃದ್ಧರವರೆಗೂ ಬಹುತೇಕರು ಕ್ಲೀನ್ ಶೇವ್‌ಗೆ 'ಗುಡ್ ಬೈ' ಹೇಳಿ ಕುರುಚಲು ಅಥವಾ ಪೊಗದಸ್ತಾದ ಗಡ್ಡವನ್ನು ಮುಖದ ಮೇಲೆ ಬೆಳೆಸುವುದನ್ನು ಫ್ಯಾಷನ್ ಆಗಿ ರೂಢಿಸಿಕೊಳ್ಳುತ್ತಿದ್ದಾರೆ.

ಗಡ್ಡ ಬೆಳೆಸಲು ಅದರ ಮೇಲೆ ಪ್ರೀತಿಯಿದ್ದರಷ್ಟೇ ಸಾಲದು, ನಿರಂತರ ಕಾಳಜಿಯೂ ಇರಬೇಕಾದುದು ಅವಶ್ಯಕ. ಇಲ್ಲವಾದಲ್ಲಿ ಶಿಲಾಯುಗದ ಮಾನವನಂತೆ ನಾವೂ ಕಂಡುಬಂದಲ್ಲಿ ಆಶ್ಚರ್ಯವಿಲ್ಲ. ಹಾಗಾಗಿ ಗಡ್ಡವನ್ನು ಹೊಂದಲೇ ಬೇಕೆಂಬ ಇಚ್ಛೆ ನಿಮ್ಮದಾದಲ್ಲಿ ಕೆಲವು ಸಲಹೆಗಳನ್ನು ಪಾಲಿಸಿ.

ಬೆಳೆಯುವ ಪ್ರಾರಂಭದ ಹಂತದಲ್ಲಿ ಗಡ್ಡವು ಬಹಳಷ್ಟು ತುರಿಕೆಯನ್ನು ಉಂಟು ಮಾಡುತ್ತದೆ. ಅದು ಕೆಲವೊಮ್ಮೆ ಅತೀವವೆನಿಸಿದರೂ ಅದನ್ನು ನೀವು ಸಹಿಸಿಕೊಳ್ಳಲೇ ಬೇಕಾಗುತ್ತದೆ. ನಂತರದ ಹಂತದಲ್ಲಿ ತುರಿಕೆ ನಿಧಾನವಾಗಿ ಕ್ಷೀಣಿಸುತ್ತಾ ಬರುತ್ತದೆ, ಇಂತಹ ತುರಿಕೆಯಿಂದ ಮುಕ್ತಿಗಾಗಿ ನಿಮ್ಮ ಗಡ್ಡವನ್ನು ಆದಷ್ಟು ಸ್ವಚ್ಛವಾಗಿಟ್ಟುಕೊಳ್ಳಿ. ಅದನ್ನು ತಲೆಕೂದಲನ್ನು ಸ್ವಚ್ಛಗೊಳಿಸಿದಂತೆಯೇ ಶಾಂಪುವಿನಿಂದ ತೊಳೆದು ಶುಭ್ರಗೊಳಿಸುತ್ತಿರಿ.

ನಿಮ್ಮ ಗಡ್ಡವನ್ನು ಪ್ರಾರಂಭದಿಂದಲೇ ನಿಮ್ಮಿಷ್ಟದ ಆಕಾರಕ್ಕೆ ಬರುವಂತೆ ಮಾಡಲು ಸಾಧ್ಯವಿಲ್ಲ. ಮೊದಲು ಅದನ್ನು ಹುಲುಸಾಗಿ ಬೆಳೆಯಲು ಬಿಡಿ, ಕೆಲವು ವಾರಗಳ ನಂತರ ಅದನ್ನು ನಿಮಗೊಪ್ಪುವ ತೆರದಿ ಟ್ರಿಮ್ ಮಾಡಿಸಿಕೊಳ್ಳಿ. ಗಡ್ಡದ ಮೇಲೆ ಯಾವುದೇ ಕಾರಣಕ್ಕೂ ಸಾಬೂನನ್ನು ಮಾತ್ರ ಬಳಸಬೇಡಿ, ಅದರಿಂದ ಮುಖದ ತ್ವಚೆಯು ಶುಷ್ಕವಾಗಿ, ಗಡ್ಡವು ಹಂತ ಹಂತವಾಗಿ ಉದುರಿ ಹೋಗಲೂ ಬಹುದು.

ಗಡ್ಡದ ಆರೈಕೆಗೆ ಕಂಡೀಷನರ್ ಬಳಸುವುದು ಒಂದು ಉತ್ತಮ ಸಲಹೆ. ಇಲ್ಲವಾದಲ್ಲಿ ಗಡ್ಡದ ಕೂದಲು ಒಂದಕ್ಕೊಂದು ವಿರುದ್ಧವಾಗಿ ಬೆಳೆದು ಕಿರಿಕಿರಿಯನ್ನುಂಟು ಮಾಡಬಹುದು. ಗಡ್ಡದ ಮಧ್ಯದಲ್ಲಿ ಅಲ್ಲಲ್ಲಿ ಕಂಡುಬರುವ ಸೀಳು ತುದಿಗಳುಳ್ಳ ಕೂದಲುಗಳನ್ನು ನಿವಾರಿಸಿಕೊಳ್ಳಿ.

ದೀರ್ಘಕಾಲದ ಗಡ್ಡದ ನಿರ್ವಹಣೆಗಾಗಿ ನೀವು ಸೆಲೂನ್ ಗಳಿಗೆ ಬಹಳಷ್ಟು ಹಣವನ್ನು ವ್ಯಯಿಸುವ ಬದಲು ನಿಮ್ಮದೇ ಆದ ಸ್ವಂತ ಶೇವಿಂಗ್ ಪರಿಕರಗಳುಳ್ಳ ಕಿಟ್ ಹೊಂದುವುದು ಸೂಕ್ತ. ಇದರಿಂದ ನಿಮ್ಮ ಗಡ್ಡದ ಆರೈಕೆಯನ್ನು ಸ್ವತಃ ನೀವೇ ನಿರ್ವಹಿಸಲು ಸಹಕಾರಿಯಾಗಬಲ್ಲದು.

ಇಷ್ಟೆಲ್ಲಾ ಕಷ್ಟಗಳನ್ನನುಭವಿಸಿ ಗಡ್ಡವನ್ನು ಬೆಳೆಸುವುದಾದರೂ ಏಕೆ ಎಂಬ ಮನೋಭಾವದಿಂದಲೇ ಬಹಳಷ್ಟು ಪುರುಷರು ಗಡ್ಡದ ಗೊಡವೆಗೇ ಹೋಗದೇ ಕ್ಲೀನ್ ಶೇವ್ ಮಾಡಿಸಿಕೊಂಡು ಸುಮ್ಮನಾಗಿ ಬಿಡುತ್ತಾರೆ. ಆದರೆ ಗಡ್ಡವು ನೀವು ಪುರುಷತ್ವವನ್ನು ಢಾಳಾಗಿ ಬಿಂಬಿಸುವಂತೆ ಮಾಡುತ್ತದೆ. ಅಷ್ಟೇ ಅಲ್ಲದೆ ನೀವೊಬ್ಬ ಸಮರ್ಥ ವ್ಯಕ್ತಿಯಂತೆ ಕಂಡುಬರುವಂತೆ ಮಾಡುತ್ತದೆ. ಈ ಕಾರಣದಿಂದಾಗಿಯೇ ನಿಜ ಪುರುಷರು ಏನೆಲ್ಲಾ ಕಷ್ಟಕೋಟಲೆಗಳನ್ನು ಸಹಿಸಿಕೊಂಡಾದರೂ ಸರಿಯೇ ಗಡ್ಡವನ್ನು ಬೆಳೆಸಿ,ಪೋಷಿಸುತ್ತಿರುತ್ತಾರೆ. ■